ಡನ್ನೋನ ಸಾಹಸ ಕಥೆಗಳು

ನಿಕೋಲಾಯ ನೋಸೊವ್



08



ಬಲೂನಿನಲ್ಲಿ ಪ್ರತ್ಯಕ್ಷ ಉಡ್ಡಾಣ



ಡನ್ನೋನ ಸಾಹಸ ಕಥೆಗಳು

ನಿಕೋಲಾಯ ನೋಸೊವ್

08

ಬಲೂನಿನಲ್ಲಿ ಪ್ರತ್ಯಕ್ಷ ಉಡ್ಡಾಣ

ಚಿತ್ರಗಳು: ಬೋರಿಸ್ ಕಲೌಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಕೊನೆಗೂ, ಬಿಸಿ ಗಾಳಿಯಿಂದ ಬಲೂನು ಹಾರುವಷ್ಟು ತುಂಬಿತು. ಡೂನೋ ಬಾಯ್ಲರ್ ಅನ್ನು ತೆಗೆದುಕೊಂಡು ಬಿಸಿ ಗಾಳಿ ಹೊರಗೆ ಹೋಗದಂತೆ ಬಲೂನಿನ ತುದಿಯನ್ನು ತಾನೇ ಗಟ್ಟಿಯಾದ ಹಗ್ಗದಿಂದ ಕಟ್ಟಿದನು. ನಂತರ ಅವನು ತನ್ನ ಸ್ನೇಹಿತರಿಗೆ ಬುಟ್ಟಿಯೊಳಗೆ ಹತ್ತುವಂತೆ ಆಜ್ಞಾಪಿಸಿದನು. ಮೊದಲು ಸ್ವಿಫ್ಟಿ ಹತ್ತಿದನು, ನಂತರ ರೋಲಿ-ಪೋಲಿ ಹತ್ತಿದನು; ಅವನು ಬಹುತೇಕ ಇತರರ ತಲೆಯ ಮೇಲೆ ಬಿದ್ದುಬಿಡುವಂತಾಯಿತು. ಅವನು ತುಂಬಾ ದಪ್ಪನಾಗಿದ್ದಷ್ಟೇ ಅಲ್ಲದೆ, ತನ್ನ ಜೇಬುಗಳನ್ನು ಸಕ್ಕರೆ, ಬಿಸ್ಕತ್ತುಗಳು ಮತ್ತು ಇನ್ನಿತರ ಎಲ್ಲ ಬಗೆಯ ವಸ್ತುಗಳಿಂದ ತುಂಬಿಕೊಂಡಿದ್ದನು. ಅದರ ಜೊತೆಗೆ ಮಳೆ ಬರಬಹುದೆಂದು ಮಳೆಗಾಲದ ಬೂಟುಗಳನ್ನು ಹಾಕಿಕೊಂಡು, ಒಂದು ಕೊಡೆಯನ್ನೂ ಹಿಡಿದುಕೊಂಡಿದ್ದನು. ಅವನ ಸ್ನೇಹಿತರು ಸಹಾಯ ಮಾಡದಿದ್ದರೆ, ಅವನು ಎಂದಿಗೂ ಬುಟ್ಟಿಯೊಳಗೆ ಹತ್ತಲು ಸಾಧ್ಯವಾಗುತ್ತಿರಲಿಲ್ಲ. ರೋಲಿ-ಪೋಲಿ ಸುರಕ್ಷಿತವಾಗಿ ಒಳಗೆ ಸೇರಿದ ನಂತರ, ಇತರ ಮೈಟ್ಸಗಳು ಏಣಿಯ ಮೇಲೆ ಚುರುಕಾಗಿ ಹತ್ತಿದರು.

ಟ್ರೇಕ್ಲಿ-ಸ್ವೀಟರ್ ಎಲ್ಲವೂ ಸುಗಮವಾಗಿ ನಡೆಯುತ್ತಿದೆಯೇ ಎಂದು ನೋಡುತ್ತಾ, ಅತ್ತಿತ್ತ ಓಡಾಡುತ್ತಿದ್ದನು.

“ಒಳಗೆ ಬನ್ನಿ, ಒಳಗೆ ಬನ್ನಿ,” ಎಂದು ಅವನು ಪದೇಪದೇ ಹೇಳುತ್ತಿದ್ದನು. “ಆರಾಮವಾಗಿ ಕುಳಿತುಕೊಳ್ಳಿ. ನಮ್ಮ ಬಲೂನಿನಲ್ಲಿ ಎಲ್ಲರಿಗೂ ಸಾಕಷ್ಟು ಜಾಗವಿದೆ.”

“ನೀನು ಕೂಡ ಒಳಗೆ ಬಾ,” ಎಂದು ಅವರು ಅವನಿಗೆ ಹೇಳಿದರು.

“ಸಾಕಷ್ಟು ಸಮಯವಿದೆ,” ಎಂದು ಅವನು ಉತ್ತರಿಸಿದನು. “ಮೊದಲು ನೀವೆಲ್ಲರೂ ಸರಿಯಾಗಿ ಕುಳಿತಿದ್ದೀರಾ ಎಂಬುದನ್ನು ನೋಡಬೇಕು.”

ಅವರು ಏಣಿಯ ಮೇಲೆ ಹತ್ತುತ್ತಿದ್ದಾಗ ಅವರ ಕೈಗಳನ್ನು ಹಿಡಿದು, ಹಿಂದಿನಿಂದ ಸ್ವಲ್ಪ ತಳ್ಳಿದರು.
ಕೊನೆಗೆ, ಟ್ರೆಯಾಕ್ಲಿ-ಸ್ವೀಟರ್ ಹೊರತುಪಡಿಸಿ ಎಲ್ಲರೂ ಒಳಗಿದ್ದರು. “ನೀನು ಒಳಗೆ ಏಕೆ ಬರುವುದಿಲ್ಲ?" ಎಂದು ಅವನ ಸ್ನೇಹಿತರು ಕೇಳಿದರು.
“ಬಹುಶಃ ನಾನು ಬರದಿರುವುದೇ ಒಳ್ಳೆಯದು," ಎಂದನು. ನಾನು ತುಂಬಾ ದಪ್ಪವಾಗಿದ್ದೇನೆ. ನನ್ನಿಲ್ಲದಿದ್ದರೂ ಒಳಗೆ ಸಾಕಷ್ಟು ಕಿಕ್ಕಿರಿದಿದೆ. ಬುಟ್ಟಿ ತುಂಬಾ ಭಾರವಾಗಿ ಬಿಡಬಹುದೆಂಬ ಭಯ ನನಗಿದೆ.”
“ಅಂಥ ಅಪಾಯವೇನೂ ಇಲ್ಲ," ಎಂದು ಅವರು ಹೇಳಿದರು.
“ಇಲ್ಲ, ನೀವು ನಾನಿಲ್ಲದೆ ಹೋಗುವುದೇ ಒಳ್ಳೆಯದು. ನಾನು ಇಲ್ಲಿ ನಿಮಗಾಗಿ ಕಾಯುತ್ತೇನೆ. ನನ್ನ ಕಾರಣದಿಂದ ಯಾರಿಗೂ ಅನಾನುಕೂಲವಾಗುವುದು ನನಗೆ ಇಷ್ಟವಿಲ್ಲ.”
“ಆದರೆ ಯಾರಿಗೂ ಆಗುವುದಿಲ್ಲ," ಎಂದನು ಡೂನೋ. “ಒಟ್ಟಿಗೆ ಹೋಗಬೇಕೆಂದು ಒಮ್ಮೆ ನಿರ್ಧರಿಸಿದ್ದೇವೆ, ಹಾಗಾದರೆ ಒಟ್ಟಿಗೇ ಹೋಗೋಣ.”
ಟ್ರೆಯಾಕ್ಲಿ-ಸ್ವೀಟರ್ ಬಹಳ ಇಷ್ಟವಿಲ್ಲದಿದ್ದರೂ ಹತ್ತಿದನು. ಆಗ ಅನಿರೀಕ್ಷಿತವಾದ ಸಂಗತಿಯೊಂದು ನಡೆಯಿತು: ಬುಟ್ಟಿ ಮತ್ತು ಬಲೂನ್ ನೆಲಕ್ಕೆ ಇಳಿದವು.
”ಹಾಗಾದರೆ ಅವು ಹಾರುವುದು ಹೀಗೆಯೇ!” ಎಂದು ಬೇಲಿಯ ಮೇಲೆ ಕುಳಿತಿದ್ದ ಮಿಡ್ಜ್ ನಗುತ್ತಾ ಹೇಳಿದನು.





“ನೀನೇಕೆ ನಗುತ್ತಿದ್ದೀಯ? ಅಪಘಾತಗಳನ್ನು ನೋಡಿ ನಗುವುದು ಸೌಜನ್ಯವಲ್ಲ." ಎಂದು ಸಿಂಕರ್ ಒರಟಾಗಿ ಕೇಳಿದನು.
“ಇದು ಅಪಘಾತವೇನಲ್ಲ," ಎಂದನು ಗ್ಲಾಸ್‌ಆಯ. “ವಿಷಯವೇನೆಂದರೆ, ಆ ಬಲೂನನ್ನು ಹದಿನೈದು ಜನರನ್ನು ಮೇಲಕ್ಕೆತ್ತುವಂತೆ ತಯಾರಿಸಲಾಗಿದೆ. ಆದ್ದರಿಂದ ಅದು ಹದಿನಾರು ಜನರನ್ನು ಮೇಲಕ್ಕೆತ್ತಲು ಸಾಧ್ಯವಿಲ್ಲ.”
“ಅಂದರೆ, ಅದು ಗಾಳಿಗೆ ಏರುವುದಿಲ್ಲವೇ?" ಎಂದು ಸಿಂಕರ್ ಕೇಳಿದನು.
“ಮೊದಲು ಯಾರನ್ನಾದರೂ ಕೆಳಗೆ ಇಳಿಸಬೇಕಾಗುತ್ತದೆ," ಗ್ಲಾಸ್‌ಆಯ ಎಂದನು. “ಬಹುಶಃ ಡನ್ನೋನನ್ನೇ ಹೊರಗೆ ಇಳಿಸುತ್ತಾರೆ," ಎಂದನು ಟಿಂಕಲ್.
ಟ್ರೇಕ್ಲಿ ಸ್ವೀಟರ್‌ಗೆ ಇದು ಸಂಭವಿಸಿದ್ದಕ್ಕೆ ತುಂಬಾ ಸಂತೋಷವಾಯಿತು, ಏಕೆಂದರೆ ಬಲೂನಿನಲ್ಲಿ ಮೇಲಕ್ಕೆ ಹೋಗಲು ಅವನು ಬಹಳ ಅಂಜಿದ್ದನು. ‘ಇದು ತುಂಬಾ ಭಾರವಾಗುತ್ತದೆ ಎಂದು ನಾನು ನಿಮಗೆ ಹೇಳಿದ್ದೆ!” ಅವನು ಅಂದನು.
“ಇಗೋ, ನಾನು ಹೊರಗೆ ಬರುತ್ತೇನೆ.”
ಅವನು ಈಗಾಗಲೇ ಒಂದು ಕಾಲನ್ನು ಕೆಳಗಿಳಿಯಲು ಇಟ್ಟಾಗ, ಡೂನೋ ಮರಳಿನಿಂದ ತುಂಬಿದ್ದ ಚೀಲಗಳಲ್ಲಿಯ ಒಂದನ್ನು ಹೊರಗೆ ಎಸೆದನು. ತಕ್ಷಣವೇ ಬಲೂನು ಮೇಲಕ್ಕೆ ಏರಲು ಪ್ರಾರಂಭಿಸಿತು. ಈ ರೀತಿಯಾಗಿ, ಮರಳಿನ ಚೀಲಗಳನ್ನು ಬುಟ್ಟಿಯಲ್ಲಿ ಏಕೆ ಇಟ್ಟಿದ್ದನೆಂಬುದನ್ನು ಎಲ್ಲರಿಗೂ ತಿಳಿಯಿತು.
ಚಪ್ಪಾಳೆಗಳ ಸದ್ದು ಮೊಳಗಿತು. ಆದರೆ ಡೂನೋ ಕೈ ಎತ್ತಿ ಅದನ್ನು ನಿಲ್ಲಿಸಿದನು. ನಂತರ ಅವನು ಒಂದು ಭಾಷಣ ಮಾಡಿದನು.
“ಬಾಯ ,ಬಾಯ, ಸ್ನೇಹಿತರೇ! ನಾವು ದೀರ್ಘ ಪ್ರಯಾಣಕ್ಕೆ ಹೊರಡುತ್ತಿದ್ದೇವೆ. ಒಂದು ವಾರದಲ್ಲಿ ಹಿಂದಿರುಗುತ್ತೇವೆ. ಮತ್ತೆ ಭೇಟಿಯಾಗುವವರೆಗೆ ಬಾಯ!” ಎಂದು ಬೀಳ್ಕೊಟ್ಟನು.
“ಬಾಯ! ಬಾಯ! ಪ್ರಯಾಣ ಸುಖಕರವಾಗಲಿ!” ಎಂದು ಪಟ್ಟಣದ ಜನರು ತಮ್ಮ ಕೈಗಳನ್ನೂ, ಟೊಪ್ಪಿಗೆಗಳನ್ನೂ ಬೀಸುತ್ತಾ ಕೂಗಿದರು.












ಡೂನೋ ತನ್ನ ಜೇಬಿನಿಂದ ಒಂದು ಪೆನ್‌ನೈಫ್ ತೆಗೆದು, ಗಿಡಕ್ಕೆ ಕಟ್ಟಿದ್ದ ಬಲೂನಿನ ಹಗ್ಗವನ್ನು ಕತ್ತರಿಸಿದನು. ನಿಧಾನವಾಗಿ ಬಲೂನು ಮೇಲಕ್ಕೆ ಏರತೊಡಗಿತು. ಒಂದು ಕ್ಷಣ ಅದು ಪೊದೆಯ ಒಂದು ಕೊಂಬೆಯಲ್ಲಿ ಸಿಕ್ಕಿಕೊಂಡಿತ್ತು, ಆದರೆ ಸ್ವಲ್ಪ ಹೊತ್ತಿನಲ್ಲೇ ಅದು ಬಿಡಿಸಿಕೊಂಡು, ಆಕಾಶದಲ್ಲಿ ಹಾರುತ್ತಾ ವೇಗವನ್ನು ಪಡೆದುಕೊಂಡಿತು.

"ಹುರ್ರೇ!" ಎಂದು ನೋಡುತ್ತಿದ್ದವರು ಕೂಗಿದರು. "ಡೂನೋ ಮತ್ತು ಅವನ ಸ್ನೇಹಿತರಿಗೆ ಹುರ್ರೇ! ಹುರ್ರೇ!"









ಜನರು ಚಪ್ಪಾಳೆ ತಟ್ಟಿ ತಮ್ಮ ಟೊಪ್ಪಿಗೆಗಳನ್ನು ಮೇಲೆ ಎಸೆದರು. ಮೈಟ್ಸ ಹುಡುಗಿಯರು ಉತ್ಸಾಹದಿಂದ ಒಬ್ಬರನ್ನೊಬ್ಬರು ತಬ್ಬಿಕೊಂಡರು. ಪೀ-ವೀ ಮತ್ತು ಟಿಂಕಲ್ ಪರಸ್ಪರ ಮುತ್ತು ಕೂಡ ಕೊಟ್ಟರು. ಮಾರ್ಗಿ ಕಣ್ಣೀರಿಟ್ಟಳು.

ಏತನ್ಮಧ್ಯೆ ಬಲೂನು ಇನ್ನೂ ಮೇಲಕ್ಕೆ, ಮೇಲಕ್ಕೆ ಹಾರುತ್ತಲೇ ಇತ್ತು. ಗಾಳಿ ಅದನ್ನು ದೂರಕ್ಕೆ ಮೇಲೆ ತೆಗೆದುಕೊಂಡು ಹೋಯಿತು. ಶೀಘ್ರದಲ್ಲೇ ಅದು ನೀಲಿ ಆಕಾಶದ ಹಿನ್ನೆಲೆಯಲ್ಲಿ ಒಂದು ಚಿಕ್ಕದಾದ ಬರಿಗಣ್ಣಿಗೆ ಕಾಣದಷ್ಟು ಒಂದು ಚುಕ್ಕಿಯಷ್ಟೇ ಆಯಿತು.

ಗ್ಲಾಸ್ಆಯ ಮನೆಯ ಮಾಳಿಗೆಯ ಮೇಲೆ ಹತ್ತಿ, ತನ್ನ ದೂರದರ್ಶಕವನ್ನು ಅದರತ್ತ ತಿರುಗಿಸಿದನು. ಕವಿ ಪೋಸಿ ಅವನ ಪಕ್ಕದಲ್ಲೇ, ಮಾಳಿಗೆಯ ತೀರ ಅಂಚಿನಲ್ಲಿ ನಿಂತಿದ್ದನು. ಅವನು ಕೈಗಳನ್ನು ಮಡಚಿಕೊಂಡು, ಉತ್ಸಾಹಭರಿತ ಜನಸಮೂಹವನ್ನು ನೋಡುತ್ತಾ, ಆಳವಾದ ಆಲೋಚನೆಯಲ್ಲಿ ಮುಳುಗಿದವನಂತೆ ಕಾಣುತ್ತಿದ್ದನು. ಇದ್ದಕ್ಕಿದ್ದಂತೆ ಅವನು ತನ್ನ ಕೈಗಳನ್ನು ಚಾಚಿ, ಗಟ್ಟಿಯಾದ ಧ್ವನಿಯಲ್ಲಿ ಕೂಗಿದನು:

"ಒಂದು ಕವಿತೆ! ನನ್ನ ಕವಿತೆಯನ್ನು ಕೇಳಿ!"



ಕ್ಷಣದಲ್ಲೇ ಮೌನ ಆವರಿಸಿತು. ಎಲ್ಲರ ತಲೆಗಳು ಪೋಸಿಯ ಕಡೆಗೆ ತಿರುಗಿದವು.
"ಒಂದು ಕವನ!" ಎಂದು ಮೈಟ್ಸಗಳು ಪರಸ್ಪರ ಪಿಸುಗುಟ್ಟಿದರು. "ನಾವು ಒಂದು ಕವನವನ್ನು ಕೇಳಲಿದ್ದೇವೆ."
ಕೊನೆಯ ಪಿಸುಮಾತೂ ನಿಂತುಹೋಗುವವರೆಗೆ ಪೋಸಿ ಕಾಯ್ದನು. ನಂತರ ಕಣ್ಮರೆಯಾಗುತ್ತಿದ್ದ ಬಲೂನಿನ ದಿಕ್ಕಿನತ್ತ ಒಂದು ಕೈ ಚಾಚಿ, ಗಂಟಲು ಸರಿಪಡಿಸಿಕೊಂಡು, ಮತ್ತೊಮ್ಮೆ ಹೇಳಿದನು:
"ಒಂದು ಕವನ."
ಸ್ವಲ್ಪ ವಿರಾಮದ ನಂತರ, ತಾನೇ ಈಗಷ್ಟೇ ರಚಿಸಿದ್ದ ಸಾಲುಗಳನ್ನು ಪಠಿಸಲು ಆರಂಭಿಸಿದನು:

ನಮ್ಮ ಮೈಟ್ ಸಹೋದರರು ಹೊರಟುಹೋದರು
ಈ ಸಂಭ್ರಮದ ದಿನ ಬಲೂನಿನಲ್ಲಿ ಹಾರಿಹೋದರು.
ಅವರಿಗೆ ರೆಕ್ಕೆಗಳಿಲ್ಲ, ಆದರೆ ನನ್ನ ಮಾತು ಕೇಳಿ,
ಯಾವುದೇ ಹಕ್ಕಿಯಂತೆ ಅವರು ಹಾರಬಲ್ಲರು, ಖಂಡಿತವಾಗಿ!
ಅದಕ್ಕೆ ಕಾರಣ ಬುದ್ಧಿ ಹೊಂದಿರುವುದೇ, ಟ್ರಾಲಾ!
ಅದಕ್ಕೆ ಕಾರಣ ಶ್ರಮಪಡುವುದೇ, ಹುರ್ರೇ!



ಎಷ್ಟೊಂದು ಕೂಗಾಟ, ಎಷ್ಟೊಂದು ಕೈತಟ್ಟುವಿಕೆ, ಎಷ್ಟೊಂದು ಚಪ್ಪಾಳೆ! ಮೈಟ್ಸ ಹುಡುಗರು ಪೋಸಿಯನ್ನು ಮೇಲ್ಮಾಳಿಗೆಯಿಂದ ಕೆಳಗೆಳೆದು, ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಮನೆಗೆ ಕರೆದೊಯ್ದರು;. ಮೈಟ್ಸ ಹುಡುಗಿಯರು ಹೂವಿನ ದಳಗಳನ್ನು ದಾರಿಯುದ್ದಕ್ಕೂ ಚೆಲ್ಲಿದರು. ಬಲೂನನ್ನು ತಯಾರಿಸಿ ಅದರಲ್ಲಿ ಹಾರಿಹೋದವನೇ ಪೋಸಿ ಎಂಬಂತೆ ಅವರು ಅವನನ್ನು ಬಹಳವಾಗಿ ಕೊಂಡಾಡಿದರು. ಮೈಟ್ಸಗಳು ಅವನ ಕವನವನ್ನು ಬಾಯಿಪಾಠ ಮಾಡಿಕೊಂಡು ಬೀದಿಗಳಲ್ಲಿ ಹಾಡಿದರು.

ಆ ಸಂಜೆ ನೀವು ಎಲ್ಲಿಗೆ ಹೋದರೂ ಜನರು ಹೀಗೆ ಹಾಡುತ್ತಿರುವುದು ಕೇಳಿಬರುತ್ತಿತ್ತು:

ನಮ್ಮ ಮೈಟ್ ಸಹೋದರರು ಹಾರಿಹೋದರು
ಈ ಸಂಭ್ರಮದ ದಿನ ತಮ್ಮ ಬಲೂನಿನಲ್ಲಿ.
ಅವರಿಗೆ ರೆಕ್ಕೆಗಳಿಲ್ಲ, ಆದರೆ ನನ್ನ ಮಾತು ನಂಬಿ,
ಯಾವುದೇ ಹಕ್ಕಿಯಂತೆ ಅವರೂ ಹಾರುತ್ತಾರೆ!
ಅದು ಬುದ್ಧಿವಂತಿಕೆ ಹೊಂದಿರುವ ಫಲ, ಟ್ರಾಲಾ!
ಅದು ಶ್ರಮಪಡುವುದರ ಫಲ, ಹುರ್ರೆ!







